## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್ ಇವರ ನಿಯಮ 330ರ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಸೂಚನೆ:**

ರಾಜ್ಯದಲ್ಲಿ ದಲಿತ ಸಮುದಾಯಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕುತ್ತಿರುವಂತಹ ಘಟನೆಗಳು ಪದ ಪದ ಮರುಕಳಿಸುತ್ತಿರುವುದು ಶೋಚನೀಯ ಹಾಗೂ ಅಮಾನವೀಯ ಸಂಗತಿ. ಇಂತಹ ಅನಿಷ್ಟ ಪದ್ಧತಿಗಳು ಇನ್ನೂ ಜೀವಂತವಾಗಿರುವುದು ಸಮಾಜದ ಪ್ರತಿಯೊಬ್ಬರೂ ತಲೆತಗ್ಗಿಸುವಂತಹ ವಿಷಯವಾಗಿದೆ. ಸಾಮಾಜಿಕ ಬಹಿಷ್ಕಾರ ಎನ್ನುವುದು ತಳಸಮುದಾಯದವರನ್ನು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದಿಂದ ಹಿಂಜರಿಯಲು ಬಲವಂತ ಮಾಡುವ ಭಯಾನಕ ಆಚರಣೆಯಾಗಿದೆ. ಇಂತಹ ಅನಿಷ್ಟ ಪದ್ಧತಿಗಳನ್ನು ಕಾನೂನು ಪ್ರಯೋಗ, ಅರಿವು ಮೂಡಿಸುವ ಕಾರ್ಯಕ್ರಮಗಳು, ಸರ್ಕಾರದ ಮಟ್ಟದಲ್ಲಿ ತಕ್ಷಣದ ಕ್ರಮಗಳು ಋಸಹಕಾರ ಮತ್ತು ಸಮಾನತೆಯನ್ನು ತರುವುದರ ಮೂಲಕ ತಡೆಗಟ್ಟಬಹುದಾಗಿದ್ದು, ಸಮಾಜದಲ್ಲಿ ದಲಿತರ ಮತ್ತು ಇತರ ಸಮುದಾಯಗಳ ನಡುವಿನ ಸಮಾನತೆಯನ್ನು ಪ್ರೋತ್ಸಾಹಿಸುವ ಚಿಂತನೆ ಮತ್ತು ಕಾರ್ಯತಂತ್ರಗಳ ಕುರಿತು ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ 1995ರ (ತಿದ್ದುಪಡಿ) ಅಧಿನಿಯಮ 2015 ರ ನಿಯಮ (2) (ಇಬಿ) ರಲ್ಲಿ "ಸಾಮಾಜಿಕ ಬಹಿಷ್ಕಾರ" ಎಂದರೆ ಮತ್ತೊಬ್ಬ ವ್ಯಕ್ತಿಗೆ ಒಪ್ಪಿಸಲು ಅಥವಾ ವ್ಯಕ್ತಿಯನ್ನು ಅನುಮತಿಸಲು ಯಾವುದೇ ರೂಢಿಗತ ಸೇವೆಯನ್ನು ಅವನಿಂದ ಪಡೆದುಕೊಳ್ಳಲು ಅಥವಾ ಇತರ ವ್ಯಕ್ತಿಯೊಡನೆ ಇಟ್ಟುಕೊಂಡು ಬರುವ ಮತ್ತೊಬ್ಬನ ಸಾಮಾಜಿಕ ಸಂಬಂಧಗಳಿಂದ ವರ್ಜಿಸಲು ಅಥವಾ ಅವನು ಇತರರುಗಳಿಂದ ಪ್ರತ್ಯೇಕಿಸಲು ನಿರಾಕರಣೆ ಎಂಬುದಾಗಿ ವಿವರಣೆ ಇರುತ್ತದೆ.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು/ತಿಳುವಳಿಕೆ ನೀಡಿ ಸಾಮಾಜಿಕ ಬಹಿಷ್ಕಾರದ ಪ್ರಕರಣಗಳು ನಡೆಯದಂತೆ ಕ್ರಮವಹಿಸಲಾಗುತ್ತಿದೆ.
- ಸಮಾಜದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ಹಾಗೂ ಇತರೆ ಸಮುದಾಯಗಳ ನಡುವೆ ಸಮಾನತೆಯನ್ನು ತರಲು ಸಮಾಜ ಕಲ್ಯಾಣ ಇಲಾಖೆಯಿಂದ ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.
- ಅಂತರ್ಜಾತಿ ವಿವಾಹ, ವಿಧವಾ ಮರು ವಿವಾಹ, ಒಳಪಂಗಡಗಳ ಅಂತರ್ಜಾತಿ ವಿವಾಹ, ದೇವದಾಸಿ ಮಕ್ಕಳ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.
- ಸಮಾಜ ಕಲ್ಯಾಣ ಇಲಾಖೆಯಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕಾರ್ಯಾಗಾರ, ವಿಚಾರಗೋಷ್ಠಿ ಮತ್ತು ಅರಿವು ಮೂಡಿಸಲು ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತ್, ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಏರ್ಪಡಿಸಲಾಗುತ್ತಿದೆ.
- ಜಿಲ್ಲೆಗಳಲ್ಲಿ 2023 ನೇ ಸಾಲಿನಲ್ಲಿ 762 ಮತ್ತು 2024 ನೇ ಸಾಲಿನಲ್ಲಿ 639 ಅರಿವು ಮೂಡಿಸುವ ಕಾರ್ಯಕ್ರಮಗಳನ್ನುಏರ್ಪಡಿಸಲಾಗಿರುತ್ತದೆ.
- ಸಾಮಾಜಿಕ ಬಹಿಷ್ಕಾರ ಪ್ರಕರಣ ನಡೆದ ಸ್ಥಳಕ್ಕೆ ಜಿಲ್ಲಾಡಳಿತ ಭೇಟಿ ನೀಡಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿ ರಕ್ಷಣೆ ನೀಡುವ ಕ್ರಮವನ್ನು ವಹಿಸಲಾಗುತ್ತಿದೆ.
- ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಶಾಂತಿ ಸಭೆ ನಡೆಸಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲಾಗುತ್ತಿದೆ.
- ಸಾಮಾಜಿಕ ಬಹಿಷ್ಕಾರಕ್ಕೊಳಗಾದವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

**ಸಕಇ 564 ಎಸ್‌ಎಲ್‌ಪಿ 2024**

(ಡಾ: ಹೆಚ್.ಸಿ.ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು